ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

"ವಾರ್ತಾ ಭವನ", ಡಿ.ಸಿ.ಕಂಪೌಂಡ, ಧಾರವಾಡ-580001. ( 0836-2447469)

ಇ-ಮೇಲ್:- varthabhavandwd74@gmail.com

ದಿನಾಂಕ: 07-12-2018

# ಸ್ವಚ್ಛತಾ ಆಂದೋಲನಕ್ಕೆ ಸ್ವಯಂ ಪ್ರೇರಣೆಯ ಬೆಂಬಲ

**ಧಾರವಾಡ (ಕರ್ನಾಟಕ ವಾರ್ತೆ) ಡಿ.07:** ಅಖಿಲ ಭಾರತ 84ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಜಿಲ್ಲಾಡಳಿತ, ಕನ್ನಡ ಸಾಹಿತ್ಯ ಪರಿಷತ್ತು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಆರಂಭಿಸಿರುವ ಸ್ವಚ್ಛತಾ ಆಂದೋಲನಕ್ಕೆ ಕನ್ನಡ ಪರ ಸಂಘಟನೆಗಳು, ವಿದ್ಯಾರ್ಥಿಗಳು, ಸಾಹಿತಿಗಳು ಸ್ವಯಂ ಪ್ರೇರಣೆಯಿಂದ ಬೆಂಬಲ ವ್ಯಕ್ತಪಡಿಸಿ ಆಂದೋಲನದಲ್ಲಿ ಭಾಗವಹಿಸುತ್ತಿದ್ದಾರೆ.

ಇಂದು ಬೆಳಿಗ್ಗೆ ಕರ್ನಾಟಕ ಕಾಲೇಜ್ ವೃತ್ತದಿಂದ ಆರಂಭವಾದ ಆಂದೋಲನವು ಹಳಿಯಾಳ ನಾಕಾ, ದಾಸನಕೊಪ್ಪ ವೃತ್ತ, ಎಸ್‌ಪಿ ಕಚೇರಿ ಮಾರ್ಗಗಳಲ್ಲಿ ಕಸಗುಡಿಸಿ, ಕಳೆಯ ಗಿಡಗಳನ್ನು ತೆರವುಗೊಳಿಸಲಾಯಿತು. ಮಹಾನಗರಪಾಲಿಕೆಯ ಪೌರಕಾರ್ಮಿಕರು ಚರಂಡಿಗಳನ್ನು ಶುಚಿಗೊಳಿಸಿ ತ್ಯಾಜ್ಯ ವಿಲೇವಾರಿ ಮಾಡಿದರು.

ಸ್ವಯಂ ಪ್ರೇರಣೆಯಿಂದ ಈ ಆಂದೋಲನದಲ್ಲಿ ಭಾಗವಹಿಸಿದ ಸಾಹಿತಿ ಡಾ. ವಿ.ಸಿ. ಐರಸಂಗ್, ಸ್ವಚ್ಛತಾ ಕಾರ್ಯವನ್ನು ಉತ್ಸಾಹದಿಂದ ಕೈಗೊಂಡರು. ಧಾರವಾಡದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಬಹಳ ವರ್ಷಗಳ ನಂತರ ನಡೆಯುತ್ತಿರುವುದು ಸಂತಸ ತಂದಿದೆ. ಧಾರವಾಡವೆಂದರೆ ನಾಡಿನಾದ್ಯಂತ ಶಿಕ್ಷಣ, ಸಂಸ್ಕೃತಿಗೆ ಹೆಸರುವಾಸಿಯಾಗಿದೆ. ಈ ಕೀರ್ತಿ ಇನ್ನಷ್ಟು ಹೆಚ್ಚಾಗುವಂತೆ ಸಮ್ಮೇಳನ ಆಯೋಜಿಸಲು ಧಾರವಾಡದ ಎಲ್ಲ ನಾಗರಿಕರು ಕೈಜೋಡಿಸಬೇಕು ಎಂದರು.

ಎಫ್.ಬಿ. ಕಣವಿ, ರಾಮು ಮೂಲಗಿ ಮತ್ತು ಸಂಗಡಿಗರು ಜಾಗೃತಿ ಗೀತೆಗಳನ್ನು ಹಾಡಿದರು.

ಜಿಲಾ ಕಸಾಪ ಅಧ್ಯಕ್ಷ ಡಾ: ಲಿಂಗರಾಜ ಅಂಗಡಿ, ವರಕವಿ ಡಾ.ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಅಧ್ಯಕ್ಷ ಡಾ.ಡಿ.ಎಂ. ಹಿರೇಮಠ ಜಿ.ಪಂ. ಸಿಇಓ ಡಾ. ಸತೀಶ್ ಬಿ.ಸಿ., ಉಪ ಅರಣ್ಯ ಸಂರಕ್ಷಣಾಧಿಕಾರಿ ಮಹೇಶ್ ಕುಮಾರ, ಡಿಸಿಎಫ್ ದೀಪಾ ಕಂಟ್ರ್ಯಾಕ್ಟರ್, ಅಪರ ಜಿಲ್ಲಾಧಿಕಾರಿ ಇಬ್ರಾಹಿಂ ಮೈಗೂರ ಸೇರಿದಂತೆ ಜಿಲ್ಲೆಯ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ, ಗುಂಗರಗಟ್ಟಿ ಅರಣ್ಯ ಅಕಾಡೆಮಿಯ ಪ್ರಶಿಕ್ಷಣಾರ್ಥಿ ಆರ್‌ಎಫ್‌ಓ ಗಳು, ಡಯಟ್ ಪ್ರಾಯೋಗಿಕ ಶಾಲೆಯ ವಿದ್ಯಾರ್ಥಿಗಳು, ಶಿಕ್ಷಕರು, ನೌಕರರ ಸಂಘಟನೆಗಳ ಸದಸ್ಯರು ಸ್ವಚ್ಛತಾ ಆಂದೋಲನದಲ್ಲಿ ಭಾಗವಹಿಸಿದ್ದರು.

(ಫೋಟೋ ಇವೆ)

*****************